O.S 251/2016

ಪಿ. ಡಬ್ಲೂ-1

ದಿನಾಂಕ:**12.02.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಎ.ಜಿ.ಪಿ. ರವರಿಂದ**

ದಾವಾ ಸ್ವತ್ತು ನಿಮ್ಮ ತಂದೆಗೆ ಹೇಗೆ ಬಂತು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲಾತಿ ಇಲ್ಲ ಎಂದು ನುಡಿಯುತ್ತಾರೆ, ಮುಂದುವರೆದು ನಾವೇ ಸ್ವಾದೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಯಾವ ಯಾವ ವರ್ಷ ಏನು ಬೆಳೆ ಬೆಳೆದಿದ್ದೇನೆಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ. ತಿದ್ದುಪಡಿ ಮಾಡಿ ಎಂದು ಕೋರಿಕೊಂಡಿದ್ದು, ತಿದ್ದುಪಡಿ ಕೋರಿ ಎ.ಸಿ ಕಚೇರಿಗೆ ಅರ್ಜಿ ಸಲ್ಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅವರಿಂದ ತೊಂದರೆಯಾದ ಕಾರಣ ಇಲ್ಲಿ ದಾವೆ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಹಿಂದೆ ತಾಲ್ಲೂಕು ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದೇನೆಂದು ಸಾಕ್ಷ್ಯ ನುಡಿದಿದ್ದು, ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅವರಿಂದ ತೊಂದರೆಯಾದ ಕಾರಣ ಇಲ್ಲಿ ದಾವೆ ಹೂಡಿರುತ್ತೇನೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಆರ್.ಆರ್.ಟಿ. **878/2010-11** ರಂತೆ ಮಾನ್ಯ ಉಪವಿಭಾಗಾಧಿಕಾರಿಗಳು ದಿ: **21.07.2010** ರಂದು ಆದೇಶ ಮಾಡಿರುತ್ತಾರೆಂದರೆ ಸಾಕ್ಷಿ ಅಳತೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶದ ಪ್ರಕಾರ ಆಕಾರ ಬಂಧು ವಿಸ್ತೀರ್ಣ ತಿದ್ದುಪಡಿಯಾಗಿರುತ್ತದೆಂದರೆ ಸಾಕ್ಷಿ ಉತ್ತರಿಸಿರುವುದಿಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶವನ್ನು ಕೋರಿದ್ದರಿಂದ ನೀಡಿಲಾಯಿತು).**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.